

ತರಕಾರಿ, ಹಣ್ಣು ಕೇವಲ ಸೇವನೆಗಷ್ಟೇ ಅಲ್ಲ, ಅದರಲ್ಲಿರುವ ಬೀಜಗಳಿಂದ ಆಭರಣಗಳನ್ನು ತಯಾರಿಸಿ ಸಂದರ್ಭಕ್ಕೆ ಅನುಸಾರ ತೊಡುವುದು ಒಂದು ವಿಶಿಷ್ಟ ಕಲೆಯೇ ಸರಿ. ಪರಿಸರಸ್ನೇಹಿ ಎನಿಸಿಕೊಂಡಿರುವ ಈ ಆಭರಣಗಳನ್ನು ದಿರಿಸಿಗೆ ಅನುಸಾರ ತೊಡಲಾಗುತ್ತದೆ. ಉತ್ತು, ಬಿತ್ತುವ ಬೀಜಗಳನ್ನೇ ಬಳಸಿ ಆಭರಣ ಮಾಡುವುದು ಸದ್ಯದ ಟ್ರೆಂಡ್.

ರುದ್ರಾಕ್ಷಿ, ತುಳಸಿ ಬೀಜಗಳಿಂದ ಬಹಳ ಸರಳವೆನಿಸುವ ಆಭರಣಗಳನ್ನು ತಯಾರಿಸಿ, ಸಾಂಪ್ರದಾಯಿಕವಾಗಿ ತೊಡುವ ಪದ್ಧತಿ ಅನಾದಿ ಕಾಲದಿಂದಲೂ ಇತ್ತು. ಈಗ ಅದಕ್ಕೆ ಹಲವು ಬೀಜಗಳು ಸೇರ್ಪಡೆಯಾಗಿವೆ. ಗಜ್ಜುಗ, ಸಪೋಟ, ತೊಗರಿ, ಉತ್ರಾಣಿ ಬೀಜಗಳು, ಸೇಬು ಹಣ್ಣಿನ ಬೀಜ, ಕಲ್ಲಂಗಡಿ ಹಣ್ಣಿನ ಬೀಜ, ಒಣಗಿದ ಅವರೆ ಬೀಜ, ಸೂರ್ಯಕಾಂತಿ ಬೀಜ... ಹೀಗೆ ತರಹೇವಾರಿ ಬೀಜಗಳನ್ನು ಬಳಸಿ ಆಭರಣಗಳನ್ನು ತಯಾರಿಸಲಾಗುತ್ತದೆ. ಕೆಲವು ವಿಶಿಷ್ಟ ಎನಿಸುವ ಬೀಜಗಳ ಆಭರಣಗಳು ಹೀಗಿವೆ.

ಭತ್ತದ ಆಭರಣ: ತೆನೆಯಿಂದ ಭತ್ತಗಳನ್ನು ಬೇರ್ಪಡಿಸಿ, ಅದಕ್ಕೆ ಬೇಕಾದ ಬಣ್ಣ ನೀಡಲಾಗುತ್ತದೆ. ಇದರಿಂದ ನೆಕ್ಲೇಸ್ ಹಾಗೂ ಪದಕಗಳನ್ನು ತಯಾರಿಸುವುದಕ್ಕೆ ಸೂಕ್ತ. ದೊಡ್ಡ ಗಾತ್ರದ ಕಿವಿಯೋಲೆ, ಜುಮ್ಕಾಗಳನ್ನು ತಯಾರಿಸಲು ಭತ್ತ ಉತ್ತಮ.

ಕೋರಲ್ ಟ್ರೀ ಸೀಡ್ಸ್: ಗಾಢ ಕೆಂಪು ಬಣ್ಣದಲ್ಲಿರುವ ಕೋರಲ್ ಟ್ರೀ ಸೀಡ್ಸ್ ನೈಸರ್ಗಿಕವಾಗಿ ಬಹಳ ಹೊಳಪನ್ನು ಹೊಂದಿರುತ್ತದೆ. ಹವಳದಂತೆ ಕಾಣುವ ಈ ಬೀಜಗಳ ಆಭರಣಗಳಿಗೆ ಭಾರೀ ಬೇಡಿಕೆ ಇದೆ. ನೆಕ್ಲೇಸ್, ಕಿವಿಯೋಲೆ, ಬ್ರೇಸ್ಲೆಟ್ ಹಾಗೂ ಆ್ಯಂಕ್ಲೆಟ್‌ನಲ್ಲಿಯೂ ಕೋರಲ್ ಟ್ರೀ ಸೀಡ್ಸ್ ಅನ್ನು ಬಳಸಲಾಗುತ್ತದೆ.

ಸಪೋಟ ಬೀಜ: ಸಪೋಟ ಹಣ್ಣಿನ ಸ್ವಾದ ಸಿಹಿ. ಅದರಿಂದ ತಯಾರಾಗುವ ಆಭರಣವು ಟ್ರೆಂಡಿ ಎನಿಸಿವೆ. ಸಾಮಾನ್ಯವಾಗಿ ನಕ್ಷತ್ರಾಕಾರದ ಕಿವಿಯೋಲೆಗಳನ್ನು ಸಪೋಟ ಬೀಜಗಳಿಂದ

# ಪರಿಸರಸ್ನೇಹಿ ಬೀಜಾಭರಣ

**ಹಣ್ಣು ತರಕಾರಿಗಳ ಬೀಜಗಳನ್ನು ಬಳಸಿ ತಯಾರಿಸುವ ಒಡವೆ ಈಗಿನ ಟ್ರೆಂಡ್. ಪರಿಸರಸ್ನೇಹಿ ಎನಿಸಿಕೊಂಡಿರುವ ಈ ಆಭರಣಗಳನ್ನು ದಿರಿಸಿಗೆ ಅನುಸಾರ ತೊಡಲಾಗುತ್ತದೆ.**

■ ರೂಪಾ ಕೆ.ಎಂ.



